ಊ) ಈ ರೀತಿ ನಡೆದಿದ್ದ ಪ್ರಸಂಗಗಳು ಯಾವುವು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) 12

ಆ) 1) 1990-91 ರೂ. 39,375-00
2) 1991-92 ರೂ. 50,509-00
3) 1992-93 ರೂ. 41,233-00

ಇ) ಶಿರಾ ನಿರೀಕ್ಷಣಾ ಮಂದಿರಕ್ಕೆ ತೆಂಗಿನ ನಾರಿನ ನೆಲಹಾಸು, ಕುಷನ್ ಹಾಸಿಗೆ, ನೀರಿನ ಫಿಲ್ಟರ್ ಸ್ಟೀಲ್ ಅಲ್ಮೇರಾ, ಬೆತ್ತದ ಖುರ್ಚಿಗಳು ಹಾಗೂ ಸ್ಟೀಲ್ ಖುರ್ಚಿಗಳನ್ನು ಖರೀದಿಸಲಾಗಿದೆ.

ಈ) ತಲುಪಿವೆ.

ಉ) ಇಲ್ಲ

ಊ) ಉದ್ಭವಿಸುವುದಿಲ್ಲ.

ಕೂಡ್ಲಿಗಿ ತಾಲ್ಲೂಕಿನಲ್ಲಿ ಸುಟ್ಟುಹೋದ ವಿದ್ಯುತ್ ಪರಿವರ್ತಕ

625 - ಶ್ರೀ ಕೆ.ವಿ. ರವೀಂದ್ರನಾಥ ಬಾಬು (ಕೊಟ್ಟೂರು) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೂಡ್ಲಿಗಿ ತಾಲ್ಲೂಕಿನಲ್ಲಿ ಸುಟ್ಟುಹೋದ ವಿದ್ಯುತ್ ಪರಿವರ್ತಕಗಳ ಸಂಖ್ಯೆ ಎಷ್ಟು? ಇವುಗಳಲ್ಲಿ ಬದಲಾಯಿಸಲಾದ ಹಾಗೂ ಬಾಕಿ ಉಳಿದಿರುವ ಪರಿವರ್ತಕಗಳ ಸಂಖ್ಯೆ ಎಷ್ಟು?

ಆ) ಕೆಲವು ವಿದ್ಯುತ್ ಪರಿವರ್ತಕಗಳು ಖಾತರಿಯ ಅವಧಿಯಲ್ಲಿ ಸುಟ್ಟುಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಎಷ್ಟು ಹಾಗೂ ಕಾರಣಗಳೇನು?

ಶ್ರೀ ಕೆ.ಎ. ನಿಸಾರ್ ಅಹಮದ್ (ಇಂಧನ ರಾಜ್ಯ ಸಚಿವರು) :

ಅ) ಪ್ರಸಕ್ತ ಸಾಲಿನಲ್ಲಿ ಏಪ್ರಿಲ್ 1993ರಿಂದ ಆಗಸ್ಟ್ 1993ರ ವರೆಗಿನ ಅವಧಿಯಲ್ಲಿ 55 ವಿದ್ಯುತ್ ವಿತರಣಾ ಪರಿವರ್ತಕಗಳು ಸುಟ್ಟು ಹೋಗಿರುತ್ತವೆ. ವಿಫಲಗೊಂಡ ಈ ಪರಿವರ್ತಕಗಳ ಸ್ಥಾನದಲ್ಲಿ 42 ವಿತರಕಗಳನ್ನು ಬದಲಾಯಿಸಿದ್ದು, 14 ಪರಿವರ್ತಕಗಳನ್ನು ಶೀಘ್ರವಾಗಿ ಬದಲಾಯಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಆ) ಹೌದು, ಇದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಪ್ರಸಕ್ತ ಸಾಲಿನ ಏಪ್ರಿಲ್ 1993ರಿಂದ ಆಗಸ್ಟ್ 1993ರ ಅವಧಿಯಲ್ಲಿ ಕೂಡ್ಲಿಗಿ ತಾಲ್ಲೂಕಿನಲ್ಲಿ 29 ವಿದ್ಯುತ್ ಪರಿವರ್ತಕಗಳು ಖಾತರಿ ಅವಧಿಯಲ್ಲಿ ವಿಫಲಗೊಂಡಿದ್ದು, ಆಂತರಿಕ ತಯಾರಿಕಾ ದೋಷವು ಇದಕ್ಕೆ ಮುಖ್ಯ ಕಾರಣವಾಗಿರುತ್ತದೆ.

ಚಿಕ್ಕಜೋಗಿಹಳ್ಳಿ ವಿದ್ಯುತ್ ಉಪಕೇಂದ್ರಕ್ಕೆ ಮಂಜೂರಾಗಿರುವ ಸಿಬ್ಬಂದಿ

276 - ಶ್ರೀ ಕೆ.ವಿ. ರವೀಂದ್ರನಾಥ ಬಾಬು (ಕೂಟ್ಟರು) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಜೋಗಿಹಳ್ಳಿ 66 ಕೆ.ವಿ. ವಿದ್ಯುತ್ ಉಪಕೇಂದ್ರಕ್ಕೆ ಮಂಜೂರಾದಷ್ಟು ಸಿಬ್ಬಂದಿಯನ್ನು ತೈನಾತಿಸಲಾಗುವುದೆ?

ಆ) ಹಾಗಿದ್ದಲ್ಲಿ, ಯಾವಾಗ?

ಇ) ಕೂಡ್ಲಿಗಿ ತಾಲ್ಲೂಕಿಗೆ ಮಂಜೂರಾಗಿರುವ ಮಾರ್ಗದಾಳುಗಳ ಸಂಖ್ಯೆಯು, ತೈನಾತಿಸಿರುವ ಸಂಖ್ಯೆಗಿಂತ ಜಾಸ್ತಿಯಲ್ಲವೆ?

ಈ) ಹಾಗಿದ್ದಲ್ಲಿ, ಯಾವಾಗ ಈ ಹುದ್ದೆಗಳನ್ನು ತುಂಬಲಾಗುವುದು?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು) :

ಅ) ಹೌದು.

ಆ) ಮಂಡಳಿಯ ಪರಿಶೀಲನೆಯಲ್ಲಿದೆ

ಇ) ಹೌದು

ಈ) ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಶೀಘ್ರವಾಗಿ ಕ್ರಮ ತೆಗೆದುಕೊಳ್ಳಲಾಗುವುದು.

ಸೇಡಂ ತಾಲ್ಲೂಕಿನ ಕಾಗಿನ ನದಿಗೆ ಏತ ನೀರಾವರಿ ಯೋಜನೆ

668 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಕುರಕುಂಟಾ, ಹಯ್ಯಾಳ, ತೆಲ್ಕೂರು ಇತ್ಯಾದಿ ಗ್ರಾಮಗಳ ಸಮೀಪ ಕಾಗಿನ ನದಿಗೆ ಏತ ನೀರಾವರಿ ಯೋಜನೆಗಳು ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *1992-93ನೇ ಸಾಲಿನಲ್ಲಿ ಮಂಜೂರಾಗಿರುವ ಏತ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದ ನಿಬಂಧನೆಗಳನ್ನು ಫಲಾನುಭವಿಗಳು ಒಪ್ಪಲು ತಯಾರಿದ್ದರೂ ಸಹಾ ಇಲ್ಲಿಯವರೆವಿಗೂ ಪ್ರಾರಂಭ ಮಾಡದಿರಲು ಕಾರಣವೇನು?*

ಇ) *ಈ ವರ್ಷ ಸಣ್ಣ ನೀರಾವರಿ ಇಲಾಖಾವತಿಯಿಂದ ಪ್ರಾರಂಭ ಮಾಡಲಾಗುತ್ತದೆ ಎಂದು ಮಾಹಿತಿ ನೀಡಿ ಈವರೆಗೆ ಕಾಮಗಾರಿಯನ್ನು ಕೈಗೊಳ್ಳದಿರುವುದಕ್ಕೆ ಕಾರಣಗಳೇನು?*

ಈ) *ಮಂಜೂರಾಗಿರುವ ಈ ಯೋಜನೆಗಳನ್ನು ಪ್ರಾರಂಭ ಮಾಡಿ ಆ ಭಾಗದ ಬಡ ರೈತರಿಗೆ ನೀರಾವರಿ ಅನುಕೂಲ ಮಾಡಿ ಕೊಡಲಾಗುವುದೇ?*

ಉ) *ಹಾಗಿದ್ದಲ್ಲಿ ಯಾವಾಗ?*

ಡಾ ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಕುರಕುಂಟಾ, ಹಯ್ಯಾಳ ಗ್ರಾಮಗಳ ಬಳಿ ಕಾಗಿನಾ ನದಿಗೆ ಏತ ನೀರಾವರಿ ಯೋಜನೆಗಳನ್ನು ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮ, ಬಿಜಾಪುರ ಇವರಿಂದ ಕೈಗೊಳ್ಳಲು ಉದ್ದೇಶಿಸಿದ್ದು, ಸದರೀ ಯೋಜನೆಗಳಿಂದ ನೀರಾವರಿಯಾಗುವ ಅಚ್ಚುಕಟ್ಟು ಪ್ರದೇಶವು ಉದ್ದೇಶಿತ ಕಾಗಿನ ನೀರಾವರಿ ಯೋಜನೆ ಎಡಹಳ್ಳಿ ಮುಳುಗಡೆ ಪ್ರದೇಶದಲ್ಲಿ ಬರುವುದರಿಂದ, ಈ ಯೋಜನೆಗಳನ್ನು ಕೈಬಿಡಲು ನಿರ್ಧರಿಸಿದೆ. ಸೇಡಂ ತಾಲ್ಲೂಕಿನ ತೆಲ್ಕೂರು ಏತ ನೀರಾವರಿ ಯೋಜನೆಯು ಇನ್ನೂ ಅನ್ವೇಷನಾ ಹಂತದಲ್ಲಿರುತ್ತದೆ.

ಆ) 1992-93ನೇ ಸಾಲಿನಲ್ಲಿ ನಬಾರ್ಡ್‌ನಿಂದ ಒಟ್ಟು ಎಂಟು ಏತ ನೀರಾವರಿ ಯೋಜನೆಗಳು ಮಂಜೂರಾತಿ ಪಡೆದಿದೆ. ಅವುಗಳಲ್ಲಿ ಆರು ಏತ ನೀರಾವರಿ ಯೋಜನೆಗಳ ಕೆಲಸವನ್ನು ಈಗಾಗಲೇ ಪ್ರಾರಂಭಿಸಲಾಗಿದೆ. ಆದರೆ ಮೇಲೆ ತಿಳಿಸಿರುವ ಮೂರು ಏತ ನೀರಾವರಿ ಯೋಜನೆಗಳು ಸೇರಿರುವುದಿಲ್ಲ.

ಇ) ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮವನ್ನು ರದ್ದು ಮಾಡಿ, ನಿಗಮವು ಕೈಗೊಂಡಿರುವ ಯೋಜನೆಗಳನ್ನು ಸಣ್ಣ ನೀರಾವರಿ ಇಲಾಖೆಯ ವತಿಯಿಂದ ಶಕ್ಯತೆ ಮತ್ತು ಹಣದ ಲಭ್ಯತೆ ಆಧಾರದ ಮೇಲೆ ಕೈಗೊಳ್ಳಲು ಉದ್ದೇಶಿಸಲಾಗಿದೆ.

ಈ) ಉ) ಪರಿಶೀಲಿಸಲಾಗುವುದು.

ಹುಕ್ಕೇರಿ ತಾಲ್ಲೂಕಿನ ರಸ್ತೆ ಹಾಗೂ ಕಟ್ಟಡಗಳು

351 - ಶ್ರೀ ಉಮೇಶ ವಿ. ಕತ್ತಿ (ಹುಕ್ಕೇರಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?